FirstRanker.com
Firstranker's choice
www.FirstRanker.com www.FirstRanker.com

This question paper consists of 31 questions and 8 printed pages.

Roll No.
ರೋಲ್ ನಂ.

Code No. 54/S/A/K

Set - A

# KANNADA

## ಕನ್ನಡ

## (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ______________________

Signature of Invigilators 1. ______________________
ಉಸ್ತು ವಾರಿದಾರರ ರುಜು
2. ______________________

**ಸಾಮಾನ್ಯ ಸೂಚನೆಗಳು :**

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **54/S/A/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



www.FirstRanker.com

FirstRanker.com
Firstranker's choice


# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರಪುಸ್ತಕದಲ್ಲಿ ಬರೆಯಿರಿ.

(2) ಪ್ರಶ್ನೇಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಪ್ರಶ್ನಸಂಖ್ಯೆ 1 ರಿಂದ 11 ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

1 ಮಾಸ್ತಿ ಅವರು ಹುಟ್ಟಿದ ಜಿಲ್ಲೆ .............. 1

(A) ವಿಜಯಪುರ (B) ಕಲಬುರ್ಗಿ

(C) ಕೋಲಾರ (D) ಬೆಂಗಳೂರು ಗ್ರಾಮಾಂತರ

2 ಭಾರತಮಾತೆಯ ಸಿರಿಮುಡಿ ................ 1

(A) ಬ್ರಹ್ಮಗಿರಿ (B) ತುಹಿನಗರಿ

(C) ಬಾಬಾಬುಡನಗರಿ (D) ವಿವಿಗಿರಿ

3 ಮರವನ್ನು ಕೊಕ್ಕಿನಿಂದ ಕುಕ್ಕುತ್ತಿರುವುದು .............. 1

(A) ಹಾಡುಕುಟಿಕ (B) ಸೊಡುಕುಟಿಕ

(C) ಬಳ್ಳಿಕುಟಿಕ (D) ಮರಕುಟಿಕ

4 ಅಡಿಗೆ ಮತ್ತು ಎಲೆ ಎಂಬ ಇಬ್ಬರು .................. 1

(A) ಹುಡುಗಿಯರು (B) ಸಹೋದರರು

(C) ಹುಡುಗರು (D) ರಾಜಾ-ರಾಣಿಯರು

5 ಎತ್ತಲ್ಲ ಅವು ನಮ್ಮ ....................... 1

(A) ಮುತ್ತುಗೋಳು (B) ಎತ್ತಗೋಳು

(C) ನಮ್ಮಬಾಳು (D) ನಮ್ಮಕಾಳು

6 ಲೇಖಕರು ಶಾಲುಸಾಬಿಯನ್ನು .............. ಎಂದು ಕರೆದಿದ್ದಾರೆ. 1

(A) ಯಜಮಾನ (B) ಊರಿನನಾಯಕ

(C) ಪಾಳೆಗಾರ (D) ಕನಸುಗಾರ

7 'ಅಹಿಂಸೆಯೇ ಪರಮಧರ್ಮ' ಮೊದಲಿಗೆ ಸಾರಿದವರು ................. 1

(A) ವೈಷ್ಣವರು (B) ನೇಕಾರರು

(C) ಬ್ರಹ್ಮರರು (D) ಜೈನರು

FirstRanker.com
Firstranker's choice
www.FirstRanker.com www.FirstRanker.com

8 ಮಿತ್ರ ಅವರ 'ಏಳಯ್ಯ ಬೆಳಗಾಯಿತು' ಇದು ವಿಡಂಬನಾತ್ಮಕ ................ 1

(A) ಕಥೆ (B) ಹರಟೆ

(C) ಕಾದಂಬರಿ (D) ಹಾಸ್ಯ

9 'ತ್ರಿಪದಿಗಳು' ಎಂದರೆ ................. 1

(A) 4 ಸಾಲುಗಳು (B) 5 ಸಾಲುಗಳು

(C) 3 ಸಾಲುಗಳು (D) 6 ಸಾಲುಗಳು

10 ಕಥಾನಾಯಕ .................. ಪದವೀಧರ. 1

(A) ಎಂ.ಎ (B) ಬಿ.ಎ

(C) ಬಿ.ಎಸ್‌ಸಿ (D) ಬಿ.ಕಾಮ್

11 ಕಂಪ್ಯುಟರ್ ಇದನ್ನು ಕನ್ನಡದಲ್ಲಿ .................... ಎಂದು ಕರೆಯುವರು. 1

(A) ಸುಪರ್‌ಯಂತ್ರ (B) ಗಣಕಯಂತ್ರ

(C) ಆಟೋಟಯಂತ್ರ (D) ಜಾದುಯಂತ್ರ

12 ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ

ಜಾತಿ ವ್ಯವಸ್ಥೆಯು ಮೂರುಸಾವಿರ ವರ್ಷಗಳಿಗಿಂತಲೂ ಹಳೆಯದು. ಇದರ ಉಗಮವು ವೇದಪೂರ್ವಯುಗದಲ್ಲಿ ಆಗಿದ್ದು, ಸುಮಾರು ಕ್ರಿ.ಶ.ಪೂ. 1,500 ರಲ್ಲಿ ಆರಂಭವಾದ ಈ ವ್ಯವಸ್ಥೆ ಬುದ್ಧನ ಕಾಲದಲ್ಲಿ ವಿಶೇಷವಾಗಿ ಬೆಳವಣಿಗೆ ಹೊಂದಿತ್ತು. ಕ್ರಿಸ್ತನು ಹುಟ್ಟುವುದಕ್ಕೆ ಮುಂಚೆ ಸುಮಾರು ಐದುಶತಕಗಳ ಹಿಂದೆಯೇ ಈ ಜಾತಿ ವ್ಯವಸ್ಥೆ ನಮ್ಮಲ್ಲಿತ್ತು. ಪ್ರತಿಯೊಂದು ರೂಢಿಯೂ ಆರಾಧನೆಯೂ ಅನೇಕ ಉಪಪಂಗಡಗಳ ಉದಯಕ್ಕೆ ಕಾರಣವಾಯಿತು. ನಮ್ಮ ದೇಶದಲ್ಲಿ 5,000 ಕ್ಕೂ ಹೆಚ್ಚು ಉಪಜಾತಿಗಳು, ಪಂಗಡಗಳು ಇವೆಯೆಂದು ಅಂದಾಜು ಮಾಡಲಾಗಿದ್ದು ಅವು ತಮ್ಮದೇ ಆದ ನಿರ್ದಿಷ್ಟ ಆಚರಣೆಗಳನ್ನು ಹೊಂದಿವೆ. ಈ ಜಾತಿಗಳ ಬಹುಪ್ರಮಾಣ ಮತ್ತು ಸಂಕೀರ್ಣತೆ ಗಳು ಭಾರತಿಯ ಮತ್ತು ಪಾಶ್ಚಾತ್ಯ ಸಾಮಾಜಿಕ ವಿಜ್ಞಾನಿಗಳಿಗೆ ದಿಗ್ಭ್ರಮೆ ಹಿಡಿಸಿವೆ. ಜಾತಿವ್ಯವಸ್ಥೆಯನ್ನು ನೇರವಾಗೆ ಗಮನಿಸಿದರೆ ಅದು ಅನ್ಯಾಯ ಅಮಾನವೀಯವಷ್ಟೆ ಅಲ್ಲದೆ ಅವಿವೇಕವೂ ಆಗಿದೆ. ಇದರಿಂದ ಸಮಾಜದ ಪ್ರಗತಿಗೆ ಲೆಕ್ಕಹಾಕಲು ಆಗದಷ್ಟು ಆಘಾತ ಉಂಟಾಗಿದೆ. ಹುಟ್ಟಿನ ಆಧಾರದಿಂದ ಜಾತಿ ಅಥವಾ ಪಂಗಡವು ನಿರ್ಧಾರವಾಗುತ್ತದೆ. ಅಕಸ್ಮಿಕ ಹುಟ್ಟಿನ ಆಧಾರದಿಂದ ವ್ಯಕ್ತಿಯ ಹಿರಿಮೆಯನ್ನು ನಿರ್ದರಿಸುವುದು, ಸಂಪೂರ್ಣವಾಗಿ ಅವೈಜ್ಞಾನಿಕ. ಈ ಜಾತಿವ್ಯವಸ್ಥೆಯು ನಮ್ಮ ಸಮಾಜಕ್ಕೆ ಅಂಟಿದ ಶಾಪವಾಗಿದ್ದು, ಸಮಾಜದ ಬಹುಭಾಗವನ್ನು ಅಜ್ಞಾನದಲ್ಲಿಟ್ಟದ್ದು, ಅವರು ಅತ್ಯಂತ ಹೀನ ಸ್ಥಿತಿಯಲ್ಲಿ ಬದುಕುವಂತೆ ಮಾಡಿದೆ. ಅದರ ಜೋತೆಗೆ ಇದು ಮನುಷ್ಯನ ಘನತೆಗೆ ಅವಮಾನಕರವಾದದ್ದು. ಅನೇಕ ತಲೆಮಾರುಗಳಿಂದ ಕಿಳು ಜಾತಿಗಳಿಗೆ ಸೇರಿದ ಜನರು ಆರ್ಥಿಕವಾಗಿ ಸಾಮಾಜಿಕವಾಗಿ ಮೂಕ ಮಾತನೆಯನ್ನು ಸಹಿಸಿಕೊಂಡು ಬಂದಿದ್ದಾರೆ. ಉನ್ನತ ಜಾತಿಯವರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರಲು ಈ ನೀಚ ವ್ಯವಸ್ತೆಯನ್ನು ರಕ್ಷೀಸಿ ಕೊಂಡು ಬಂಧಿದ್ದಾರೆ. ನಮ್ಮದೇಶದಲ್ಲಿ ಧರ್ಮವು ಬಲವಾಗಿ ಬೇರೂರಿ ನಿಂತಿದೆ. ಅಜ್ಞಾನದ ವೃಷ್ಟಿಗೆ ಮಿತಿಯೇ ಇಲ್ಲ. ಇದನ್ನು ನಾವು ಸರಿದೂಗಿಸುವುದು ಅನಿವಾರ್ಯ.



www.FirstRanker.com

(1) ಅಜ್ಞಾನದ ವ್ಯಾಪ್ತಿಗೆ .............. 1

(A) ಕೊನೆಯೇ ಇಲ್ಲ (B) ಮಿತಿಯೇ ಇಲ್ಲ

(C) ದು:ಖವೇ ಇಲ್ಲ (D) ಜ್ಞಾನವೇ ಇಲ್ಲ

(2) ನಮ್ಮ ದೇಶದಲ್ಲಿ ಬೇರೂರಿ ನಿಂತದ್ದು ಯಾವುದು ? 1

(A) ಪಂಗಡ (B) ಬಡತನ

(C) ಸಿರಿತನ (D) ಧರ್ಮ

(3) ಜಾತಿ ವ್ಯವಸ್ಥೆ ಎಷ್ಟು ವರ್ಷಗಳಿಗಿಂತ ಹಳೆಯದು ? 1

(4) ಜಾತಿಯ ಉಗಮ ಮತ್ತು ಬೆಳವಣಿಗೆ ಹೇಗಾಯಿತು ? 2

(5) ನಮ್ಮ ದೇಶದಲ್ಲಿ ಎಷ್ಟು ಉಪಜಾತಿಗಳಿವೆ ? ಅವು ಯಾವರೀತಿ ಆಚರಣೆ ಹೊಂದಿವೆ ? 2

(6) ಸಮಾಜದ ಪ್ರಗತಿಗೆ ಎಷ್ಟು ಆಘಾತವಾಗಿದೆ ? 1

(7) ಸಂಪೂರ್ಣವಾಗಿ ಅವೈಜ್ಞಾನಿಕ ಯಾವುದು ? 2

(8) ಜಾತಿ ವ್ಯವಸ್ಥೆಯು ಅತ್ಯಂತ ಹೀನಸ್ಥಿತಿಯಲ್ಲಿ ಬದುಕುವಂತೆ ಮಾಡಿದೆ. ಹೇಗೆ ? 2

(9) ಮೂಕಯಾತನೆಯನ್ನು ಯಾರು ಸಹಿಸಿಕೊಂಡು ಬಂದಿದ್ದಾರೆ ? 1

13 ಕೊಟ್ಟಿರುವ ಪದ್ಯವನ್ನು ಓದಿರಿ. ಕೆಳಗೆ ಕೊಟ್ಟಿರುವ ಪ್ರಶ್ನಗಳಿಗೆ ಉತ್ತರಿಸಿರಿ.

ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ.
ಬಡತನವ ಬುಡಮಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ.
ವಿಜ್ಞಾನ ದೀವಿಗೆಯ ಹಿಡಿಯಬನ್ನಿ.
ಓ, ಬನ್ನಿ, ಸೋದರರೆ, ಬೇಗಬನ್ನಿ !

ಅದೋ ನೋಡಿ, ರಷ್ಯಾ, ಜಪಾನು ತುರ್ಕಿಗಳಲ್ಲ
ಪರೆಗಳಚಿ ಹೊರಟಿಹವು ಹೊಸ ಪಯಣಕೆ.
ಬೆಳಗಿಹರು ನೆತ್ತರಣ್ಣೆಯ ತಿಳಿಮಿಸುರಿಯಲ್ಲಿ
ಕಿಚ್ಚಿಟ್ಟು ಹಳೆಕೊಳಕು ಬಣಗು ತ್ರಣಕೆ.
ಓ, ಬನ್ನಿ, ಸೋದರರೆ, ರಾಷ್ಟ್ರ ರಣಕೆ !

ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ, ಬನ್ನಿ, ಸೋದರರೆ, ವಿಶ್ವ, ಪಥಕೆ !

– ಕುವೆಂಪು

FirstRanker.com
Firstranker's choice


(1) ಯಾವ ದೀವಿಗೆಯನ್ನು ಹಿಡಿಯಬೇಕು ? 1

(A) ಅಜ್ಞಾನದ (B) ಸುಜ್ಞಾನದ

(C) ವಿಜ್ಞಾನದ (D) ಸಜ್ಞಾನದ

(2) ಪರೆಗಳಚಿ ಹೊರಟಿಹವು ಹೊಸಪಯಣಕೆ 1
ಹೊರಟಿಹವು - ವಚನ ತಿಳಿಸಿರಿ

(3) ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ 2
ಈ ಸಾಲಿನ ತಾತ್ವರ್ಯವೇನು ?
ಒಂದೆರಡು ವಾಕ್ಯಗಳಲ್ಲಿ ಬರೆಯಿರಿ

(4) 'ಹೊರಬನ್ನಿ-ಕೀಳಬನ್ನಿ' 2
ಈ ಮೇಲಿನ ಪ್ರಾಸ ಪದಗಳಂತೆ, ಇನ್ನೆರಡು ದ್ರಾಸಪದಗಳನ್ನು ಪದ್ಯದಿಂದಲೇ ಹೆಕ್ಕಿ ಬರೆಯಿರಿ.

14 ಡಾ. ಸಿದ್ದಲಿಂಗಯ್ಯ ಅವರ ಆತ್ಮಕತೆ ಯಾವುದು ? 1

15 ಹುಯೆನ್ - ತ್ಸಾಂಗ್‌ನ ಜನ್ಮಸ್ಥಳ ಯಾವುದು ? 1

16 ಪ್ರೀತಿಯು ಯಾವುದಕ್ಕೆ ಸಮವಾಗಿದೆ ? 1

17 ಅಶೋಕವನದಲ್ಲಿ ಯಾವ ದೇವಾಲಯವಿತ್ತು ? 1

18 (a) ಪಂಪಮ ಮಹಾಕವಿಯ ಎರಡು ಮಹಾಕಾವ್ಯಗಳು ಯಾವುವು ? 1

(b) ಅಂಕುಸ, ಬನವಾಸಿ, ಕಾಶಿ, ತೆಂಕಣ - ಇಲ್ಲಿ ಗುಂಪಿಗೆ ಸೇರದಪದ. 1

19 (a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ. 2

(1) ಕಟ್ಟಡವಿ

(2) ಇಂಚರ

(3) ಹೆಬ್ಬಾಗಿಲು

ಅಥವಾ

(a) 'ಇಗ' ಪ್ರತ್ಯಯ ಸೇರಿಸಿ ಎರಡು ಶಬ್ದಗಳನ್ನು ತಯಾರಿಸಿರಿ. 2

(b) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ. 2

(1) ಬಂದು + ಕಟ್ಟು

(2) ಎರಡು + ಮಡಿ

(3) ದೇವರ + ಮನೆ

ಅಥವಾ

(b) 'ಅನ್ನು' ಪ್ರತ್ಯೆಯವನ್ನು ಬಳಸಿ ಎರಡು ಪದಗಳನ್ನು ರಚಿಸಿರಿ. 2

FirstRanker.com
Firstranker's choice
www.FirstRanker.com www.FirstRanker.com

(c) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ - ಬರೆಯಿರಿ. 2

(1) ದೊಡ್ಡವರು

(2) ಕುಳಿತುಕೊ

(3) ಹಿಂಬಾಗಿಲು

ಅಥವಾ

(c) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ. 2

(1) ಕಾಡು ನಾಡಾಗುತ್ತ ಹೊರಟಿದೆ.

(2) ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ

20 ಕೆಳಗೆ ಕೊಟ್ಟಿರುವ ನುಡಿ ಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ. 2

(1) ಹೊಂಚುಹಾಕು

(2) ತನ್ನಂತೆ ಬಗೆ

(3) ರೊಮಾಂಚನಗೊಳ್ಳು

21 'ಸತ್ಯಾನ್ವೇಷಣೆ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22 ಔಷಧಿ ಕೊಳ್ಳುವಾಗ ಗಮನಿಸಬೇಕಾದ ಅಂಶಗಳಾವವು ? 4

23 ಬಸವಣ್ಣವರ ವಿಚಾರದಲ್ಲಿ ನಾವು ಆಡುವ ಮಾತುಗಳು ಹೇಗಿರಬೇಕು ? 5

24 ಜೇನುಗಳಲ್ಲಿ, ಎಷ್ಟು ಪ್ರಕಾರಗಳು ? ಸಂಕ್ಷಿಪ್ತವಾಗಿ ವಿವರಿಸಿರಿ. 5

ಅಥವಾ

ನಮ್ಮ ಸಮಾಜದಲ್ಲಿ ಇಂದಿಗೂ ಇರುವ ಮೂಢನಂಬಿಕೆಗಳಾವವು ? 5

25 ಕೆಳಗಿರುವ ಜೋಡು ನುಡಿಗಳಲ್ಲಿ ಯಾವುದಾದರೂ ಎರಡಕ್ಕೆ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ : 2+2=4

(a) ಅಡ್ಡ-ದಿಡ್ಡ

(b) ಅಕ್ಕ-ತಂಗಿ

(c) ಬೆಟ್ಟ-ಗುಡ್ಡ

26 ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಆಯಾ ವರ್ಷ ದಾಖಲಾದ ಯೋಗ ಅಧ್ಯಯನ ಕೇಂದ್ರಗಳನ್ನು ಕೊಡಲಾಗಿದೆ. ಕೆಳಗೆ ಕೊಟ್ಟ ಅಂಕಿ-ಅಂಶಗಳ ಆಧಾರದಿಂದ ಎಕ ರೇಖಾಚಿತ್ರವನ್ನು ತಯಾರಿಸಿರಿ. 5

| ವರ್ಷ : | 2000 | 2001 | 2002 | 2003 | 2004 | 2005 | 2006 | 2007 | 2008 | 2009 |
|---|---|---|---|---|---|---|---|---|---|---|
| ಯೋಗ ಅಧ್ಯಾಯನ ಕೇಂದ್ರಗಳು : | 10 | 12 | 14 | 17 | 18 | 20 | 28 | 32 | 44 | 82 |

ಅಥವಾ



www.FirstRanker.com

FirstRanker.com
Firstranker's choice
www.FirstRanker.com www.FirstRanker.com

**26** ನೀವು ನಿತಿನ್ ತಂದೆಯಲ್ಲಪ್ಪ ಊರು ಬದಾಮಿ, ನೀವು, 12ನೇ ತರಗತಿ ಪಾಸಾದ ಶಾಲೆ ವೀರಪುಲಕೇಶಿ ವಿದ್ಯಾಸಂಸ್ಥೆ. ಈಗ ನೀವು ಮುಂದಿನ ವ್ಯಾಸಂಗಕ್ಕಾಗಿ ಕೆಳಕಂಡ ಅರ್ಜಿಯನ್ನು ಭರ್ತಿಮಾಡಿರಿ. **5**

ಅರ್ಜಿಸಂಖ್ಯೆ : 175

* ನಹಿ ಜ್ಞಾನೇನ ಸದ್ರಶಂ *

ಕಿಟಲ್ ಮಹಾವಿದ್ಯಾಲಯ ಧಾರವಾಡ

ದಾಖಲಾತಿ ಅರ್ಜಿ

(1) ವಿದ್ಯಾರ್ಥಿಯ ಪೂರ್ಣಹೆಸರು : ........................
(2) ತಂದೆಯ/ಪೋಷಕರ ಹೆಸರು : ............................
(3) ಪೂರ್ಣವಿಳಾಸ : ...............................................
...............................................
...............................................
(4) ದೂರವಾಣಿ ಸಂಖ್ಯೆ : .........................................
(5) ಹುಟ್ಟಿದ ದಿನಾಂಕ : ............................................
(6) ಪಾಸಾದ ತರಗತಿ : ............................................
(7) ರಾಷ್ಟ್ರೀಯತೆ : ..................................................
(8) ಆಯ್ದ ವಿಷಯಗಳು : (ಮೂರು ಭಾಷಗಳು + ಮೂರು ವಿಷಯಗಳು)
........... ........... ............ ............. .......... ..............
(9) ರಾಷ್ಟ್ರೀಯತೆ : ..................................................
(10) ಹಿಂದಿನ ವಿದ್ಯಾರ್ಹತೆ ಮತ್ತು ಓದಿದ ಶಾಲೆ : ................................
(11) ಕುಟುಂಬದ ವಾರ್ಷಿಕ ಆದಾಯ : ........................
(12) ತಂದೆಯ ವಿದ್ಯಾರ್ಹತೆ : ......................................
(13) ತಾಯಿಯ ವಿದ್ಯಾರ್ಹತೆ : ...................................
(14) ಎಲ್ಲಿ ವಾಸಿಸುತ್ತೀರಿ (1) ಗ್ರಾಮಾಂತರ ........................... (2) ನಗರ ...........................
(15) ಪುರುಷ/ಸ್ತ್ರೀ : ..................................................
(16) ನೀವು ಉದ್ಯೋಗಸ್ತರೇ ಅಥವಾ ನಿರುದ್ಯೋಗಿಯೇ : ....................................

ವಿದ್ಯಾರ್ಥಿಯ ಸಹಿ : ..................................................

ದಿನಾಂಕ : .................................................................

(ಕಛೇರಿ ಉಪಯೋಗಕ್ಕೆ)
ದಾಖಲಿಸಲಾಗಿದೆ / ದಾಖಲಿಸಲಾಗಿಲ್ಲ
ಸಮನ್ವಯಾದಿಗಿರಿಗಳ ಸಹಿ
ದಿನಾಂಕ : ......................



www.FirstRanker.com

FirstRanker.com
Firstranker's choice
www.FirstRanker.com www.FirstRanker.com

27 "ಜಲದ ಕುಲವೇನಾದರೂ ಬಲ್ಲಿರ" ಕನಕದಾಸರ ಈ ಮಾತಿನ ವಿವರಣೆ ಕೊಡಿ. 5

28 ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(1) ಜೆ ಜವನ ಜೈ ಕಿಸೇನ
(ಶುದ್ಧರೂಪದಲ್ಲಿ ಬರೆಯಿರಿ)

(2) ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು : ತಾಯಿ ಇದರ ಬಹುವಚನರೂಪ .............

(3) ಊರು-ಕೇರಿ : ಜೋಡಿಪದ :: ತುತ್ತತುದಿ ................

(4) ಸಚಿನ್ ಊಟವನ್ನು ಮಾಡುತ್ತಿದ್ದಾನೆ.
(ಇದನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿರಿ)

(5) ಹೋ ಅವನು ಮೋದಲ ಸ್ಥಾನ ಪಡೆದನೇ
(ಇಲ್ಲಿ ಇರಬೇಕಾದ ಲೇಖನ ಚಿಹ್ನೆಗಳು)

29 ನೀವು ಕೋಲಾರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ/ನಿ, ಯೋಗೇಶ/ಯೋಗಿತಾ ಎಂದು, ಭಾವಿಸಿ, ನಿಮಗೆ ಅಗತ್ಯವಿರುವ "ಕನ್ನಡ ರತ್ನಕೋಶದ" 10 ಪ್ರತಿಗಳನ್ನು ಕಳುಹಿಸಿ ಕೊಡುವಂತೆ ಕೋರಿ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು - ಇವರಿಗೆ ಒಂದು ಪತ್ರಬರೆಯಿರಿ. 7

ಅಥವಾ

ನೀವು ಮೈಸೂರಿನ ಸೇಂಟ್ ಫಿಲೋಮಿನಾ ಪ್ರೋಢಶಾಲೆಯ 10ನೇ ತರಗತಿಯ ವಿದ್ಯಾರ್ಥಿ/ನಿ, ಅಜಯ/ವಿಜೇತಾ ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆಯ ವಿವರವನ್ನು ಕುರಿತು ಹುಬ್ಬಳ್ಳಿಯಲ್ಲಿರುವ ನಿಮ್ಮ ಗೆಳೆಯ/ತಿ, ಆಕಾಶ/ಆರತಿಗೆ ಒಂದು ಪತ್ರಬರೆಯಿರಿ.

30 ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ. ಒಂದನ್ನು ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(1) ಹೊತ್ತು ಕಳೆದರೆ ಹೋಯಿತು, ಮುತ್ತು ಒಡೆದರೆ ಹೋಯಿತು
(2) ತುಂಬಿದ ಕೊಡ ತುಳುಕುವದಿಲ್ಲ
(3) ಅಡಕೆಗೆ ಹೋದಮಾನ ಆನೆಕೊಟ್ಟರೂಬಾರದು

31 ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. 10

(1) ವಿದ್ಯಾರ್ಥಿ ಜೀವನದಲ್ಲಿ ಶಿಸ್ತು
(2) ನನ್ನ ಮೆಚ್ಚಿನ ಪ್ರಾಣಿ
(3) ಸಾಹಿತ್ಯ ಸಮ್ಮೇಳನಗಳು



www.FirstRanker.com